ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೧೯ನೇ ಮಾರ್ಚ ೧೯೮೩ ಫಾಲ್ಗುಣ ೨೮, ಶಕ ೧೯೦೮.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನು ಲಂಕರಿಸಿದರು.]

[ಕಾಂಗ್ರೆಸ್ 'ಐ' ಪಕ್ಷದ ಸದಸ್ಯರು ಅಧ್ಯಕ್ಷರ ಪೀಠದ ಎದುರುಗಡೆ (ಸದನದ ವೆಲ್‌ನಲ್ಲಿ) ಧರಣಿ ಕುಳಿತಿದ್ದರು]

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ವೆಲ್ ಒಳಗಡೆ ವಿರೋಧಪಕ್ಷದ ಎಲ್ಲ ಸ್ನೇಹಿತರೂ ಕುಳಿತಿದ್ದಾರೆ. ಈ ರೀತಿ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗಿ ಕಾರ್ಯಕಲಾಪ ನಡೆಸುವುದು ಸರಿಯಲ್ಲ ಎಂಬುದು ನನ್ನ ವಿನಂತಿ. ಕಾರಣ ಇಷ್ಟೆ.

ಅಧ್ಯಕ್ಷರು.—ತಮಗೆ ಆ ಮೇಲೆ ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ವೇಳೆ ಮುಂಗಿಯಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿನಂತಿ ಮಾಡುತ್ತೇನೆ ನಾನು...

ಅಧ್ಯಕ್ಷರು.—ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಾನೂನು ರೀತ್ಯ...

ಅಧ್ಯಕ್ಷರು.—ಕೃಷ್ಣನ್ ಅವರ್ ಮುಂಗಿಯಲಿ, ಆ ಮೇಲೆ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—ವೆಲ್‌ನಲ್ಲಿ ಕೂರಿಸಿಕೊಂಡು ಕೃಷ್ಣನ್‌ತೆಗೆದುಕೊಳ್ಳುವುದಕ್ಕಿಂತ ಮುಂಚೆ ನಾನು ತಮ್ಮಲ್ಲಿ ಮತ್ತು ವಿರೋಧ ಪಕ್ಷದಲ್ಲಿ ವಿನಂತಿ ಮಾಡಿಕೊಳ್ಳುವುದು ಮೊದಲು ಈ ಸಮಸ್ಯೆ ಬಗೆಹರಿಸೋಣ. ಮಾನ್ಯ ಉಡ್ಕುಂತಾಯ ಅವರನ್ನು...

ಶ್ರೀ ಎಸ್. ಆರ್. ಬೊಮ್ಮಾಯಿ.— ಸರ್ಕಾರದ ಪರವಾಗಿ ನಾವು ಕ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಅದಕ್ಕೆ ಇನ್ನೂ ಪರಿಹಾರ ಸಿಕ್ಕಿಲ್ಲ. ಕಾರ್ಯಕ್ರಮ ನಡೆಸಿಕೊಂಡು ಹೋಗೋಣ, ನಾಲ್ಕು ದಿವಸಗಳಿಂದ ಏನೂ ಕಾರ್ಯಕ್ರಮ ಮಾಡಿಲ್ಲ,

ಶ್ರೀ ಎಂ. ಎಸ್. ಕೃಷ್ಣನ್.— ನಿನ್ನೆಯ ದಿವಸ ತಮಗೆ ಗೊತ್ತಿರುವಹಾಗೆ ಪ್ರಯತ್ನ ಮಾಡಿದೆವು.

ಅಧ್ಯಕ್ಷರು.—ಮಾನ್ಯ ಕೃಷ್ಣನ್ ಅವರೇ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಕೃಷ್ಣನ್ ಅವರ್ ನಂತರ ಇದರ ಬಗ್ಗೆ ಚರ್ಚೆ ಮಾಡಬಹುದಾ ?

ಅಧ್ಯಕ್ಷರು.—ಕೃಷ್ಣನ್ ಅವರ್ ಮುಂಗಿಯಲಿ.

ಶ್ರೀ ಕೆ. ಬಿ. ಶಾಣಪ್ಪ.—ಕೃಷ್ಣನ್ ಅವರ್ ಮಾಡೋಣ. ಬೇಡ ಎಂದು ಹೇಳುವುದಿಲ್ಲ. ಆದರೆ...

ಶ್ರೀ ಎಂ. ಎಸ್. ಕೃಷ್ಣನ್.—ಈ ತರಹ ಸಭೆಯಲ್ಲಿ ಎಂದೂ ನಡೆದಿರಲಿಲ್ಲ. ಆಡಳಿತ ಪಕ್ಷದವರು ಹೊಸ ಪರಂಪರೆ ಹಾಕಿಕೊಡುತ್ತಿದ್ದಾರೆ.

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ ಹೇಳುತ್ತೇನೆ. ನನಗೆ ಗೊತ್ತಿದೆ.

ಶ್ರೀ ಕೆ. ಬಿ. ಶಾಣಪ್ಪ.—ಹೌಸ್ ಆರ್ಡರ್‌ನಲ್ಲಿ ಇಲ್ಲದಿರುವಾಗ...

MR. SPEAKER.—The House is in order.

ಶ್ರೀ ಕೆ. ಬಿ. ಶಾಣಪ್ಪ.—ಅದು ಹೇಗಾಗುತ್ತದೆ ?

MR. SPEAKER.—There are so many previous rulings.

(ಆ ಸಂದರ್ಭದಲ್ಲಿ ಶ್ರೀ ಕೆ. ಬಿ. ಶಾಣಪ್ಪ, ಬಿ. ಎಸ್. ಯಡಿಯೂರಪ್ಪ ಹಾಗು ಕೃಷ್ಣನ್ ಮೂವರೂ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು.—ತಾವು ಮೂವರೂ ಕುಳಿತುಕೊಳ್ಳಿ. ಮೂವರೂ ಮಾತನಾಡುವುದು ಪದ್ಧತಿಯೆ? ಒಬ್ಬೊಬ್ಬರೇ ಮಾತನಾಡುವುದು ಪದ್ಧತಿಯೆ ? ತಮ್ಮನ್ನು ಮಂತ್ರಿ ಕರೆಯುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದೇ ಒಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವಕಾಶ ಕೊಡುತ್ತೇನೆ. ಕ್ವಶ್ಚನ್ ಆವರ್ ಮುಂಗಿದ ಮೇಲೆ ಅವಕಾಶ ಕೊಡುತ್ತೇನೆ ಈಗ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ರೀತಿ ಸದನ ನಡೆಸಿದರೆ ನಾವು ವಾಕ್ ಔಟ್ ಮಾಡುತ್ತೇವೆ. ನಾನು ಏನಂತಿ ಮಾಡಿಕೊಳ್ಳುವುದು ಇದನ್ನು ಪ್ರಿಸ್ಟೀಜ್ ಎಂದು ಆಡಳಿತ ಪಕ್ಷದವರು ತೆಗೆದುಕೊಳ್ಳುವುದು ಸರಿಯಲ್ಲ. ಇದನ್ನು ಸ್ಪೋರ್ಟಿವ್ ಸ್ಪಿರಿಟ್‌ನಲ್ಲಿ ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಲಿ.

ಶ್ರೀ ಜೆ. ಎಚ್. ಪಟೇಲ್.—ಇದು ಸದನದ ಗೌರವದ ಪ್ರಶ್ನೆಯಾಗಿ ಬಂದಿದೆ ಎಂದು ಹೇಳಿದ್ದಾರೆ. ಅವರ ಅಭಿಪ್ರಾಯ ಒಂದಿದೆ. ನಮ್ಮ ಅಭಿಪ್ರಾಯ ಒಂದಿದೆ. ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡಿ ಮೂರು ದಿನಗಳನ್ನು ನಾವು ಕಳೆದಿದ್ದೇವೆ. ಒಂದು ನಿಮಿಷ ಸದನದಲ್ಲಿ ಹಾಳಾದರೂ ೮ ಸಾವಿರ ರೂಪಾಯಿಗಳು ಸರ್ಕಾರ ಖರ್ಚು ರೂಪದಲ್ಲಿ ಹೋಗುತ್ತದೆ. ಅಂಥದ್ದು ನಾಲ್ಕು ದಿವಸ ಹೋಗಿದೆ. ಎಲ್ಲ ರೀತಿಯ ಪ್ರಯತ್ನ ಮಾಡಿದರೂ ಆಗಲಿಲ್ಲ. ಆದರೂ ಸದನದ ಕಾರ್ಯಕಲಾಪ ಮಾಡಿಕೊಂಡು ಹೋಗದಿದ್ದರೆ ಅನ್ಯಾಯವಾಗುವುದಿಲ್ಲವೆ ಪ್ರಶ್ನೋತರ ನಡೆಸೋಣ ಸದನದ ಕಾರ್ಯಕಲಾಪ ನಡೆಸುವುದು ಮುಂಬ್ಯಿವೇ ಹೊರತು ನಮ್ಮದು ಪ್ರಿಸ್ಟೀಜ್ ಎಂದು ನಾವು ತಿಳಿದುಕೊಂಡಿಲ್ಲ. ಸಭೆಯ ಕೆಲವು ಪರಂಪರೆ ಇದೆ ಎಂದು ಕೃಷ್ಣನ್ ಅವರು ಹೇಳುತ್ತಾರೆ. ಪರಂಪರೆಗೆ ಗೌರವ ಕೊಟ್ಟುಕೊಂಡು ಬಂದಿದ್ದಾರೆಯೇ ? ಇದು ಪಾರ್ಟಿ ಪ್ರಶ್ನೆಯಲ್ಲ. ಸದನದ ಗೌರವವನ್ನು ಉಳಿಸಿಕೊಂಡು ಹೋಗಬೇಕು, ಆ ತರಹ ವರ್ತನೆ ಮಾಡಬೇಕು. ಮೂರು ದಿವಸದಲ್ಲಿ ೧೦-೧೫ ಸಾರಿ ಚರ್ಚೆ ಮಾಡಿದ್ದೇವೆ. ಈಗಲೂ ಸಮಯ ಹಾಳು ಮಾಡುವುದು ಬೇಡ. ಪ್ರಶ್ನೋತ್ತರ ಆದ ಮೇಲೆ ಮಾತನಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಜೆ. ಎಚ್. ಪಟೇಲರು ಮಾತನಾಡಿದರು. ನಮಗೂ ಸದನದ ಗೌರವ ಕಾಪಾಡುವುದಕ್ಕೆ ಅಷ್ಟೇ ಕಾಳಜಿ, ಕಳವಳ ಇದೆ. ಇಲ್ಲಿ ಕುಳಿತಿರುವ ಎಲ್ಲಾ ಸದಸ್ಯರಿಗೂ ಸದನದ ಗೌರವ ಕಾಪಾಡುವ ಅಭಿಪ್ರಾಯ ಇದೆ. ಹಲವಾರು ಕಾರಣಗಳಿಂದ ಇಕ್ಕಟ್ಟಿನ ಪರಿಸ್ಥಿತಿ ಬಂದು ಆ ಕಡೆ ಈ ಕಡೆ ಅಭಿಪ್ರಾಯ ಹೇಳುತ್ತಿದ್ದಾರೆ. ಯಾವುದೇ ರೀತಿಯಲ್ಲಿ ಬಗ್ಗೆ ಹರಿಸುವ ಮನೋಭಾವವನ್ನು ತೋರಿಸತಕ್ಕಂತಹ ಜವಾಬ್ದಾರಿ ಹೆಚ್ಚು ಆ ಕಡೆ ಕುಳಿತಿರುವ ಮಾನ್ಯ ಸದಸ್ಯರಿಗೆ ಇದೆ. ಮಾನ್ಯ ಮಂತ್ರಿಗಳಿಗೆ ಇದೆ. ಮಾನ್ಯ ಬೊಮ್ಮಾಯಿಯವರಿಗೆ ಇದೆ, ಮಾನ್ಯ ಜೆ. ಎಚ್. ಪಟೇಲರಿಗೆ ಇದೆ.

ಶ್ರೀ ರಾಜವರ್ಧನ್.— ಮಾನ್ಯ ಕೃಷ್ಣನ್‌ನವರು ಏನಾದರೂ ಮಾತನಾಡುವುದು ಇದ್ದರೆ ಪ್ರಶ್ನೋತ್ತರ ವೇಳೆ ಮುಂಗಿದ ಮೇಲೆ ಪ್ರಾತನಾಡಬಹುದು.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಶ್ರೀಮಾನ್ ಯಡಿಯೂರಪ್ಪನವರು, ಶ್ರೀಮಾನ್ ಶ್ಯಾಣಪ್ಪನವರು ಎಲ್ಲರೂ ಬನ್ನಿ, ಮಾತನಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಯತ್ನ ಮಾಡಿ ಎಂದು ಹೇಳುವುದು ಸರಿ ಅದನ್ನು ಬಿಟ್ಟು ಪ್ರಶ್ನೋತ್ತರ ವೇಳೆ ಮುಗಿಯಲಿ ಎಂದು ಹೇಳಿದರೆ ಹೇಗೆ ?...

SRI K. B. SHANAPPA.—Before Question Hour you have to settle this issue.

SRI M. S. KRISHNAN.—Why dont your settle this issue before the Question Hour itself ? Yesterday it was about to be settled uufortunately, it was shuttled.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೂರು ದಿವಸಗಳಿಂದಲೂ ಚರ್ಚೆ ಮಾಡುತ್ತಿದ್ದೇವೆ. ಪ್ರಶ್ನೋತ್ತರ ವೇಳೆ ಮುಗಿಯಲ್ಲಿ. ಆನಂತರ ಮಾತನಾಡೋಣ.

SRI M. S. KRISHNAN.—Why don't you settle it now alone before conducting the Question Hour ?

ಅಧ್ಯಕ್ಷರು.—ನೀವು ನಾಲ್ಕೂ ಜನವೂ ಆ ಮೇಲೆ ನನ್ನ ಛೇಂಬರಿಗೆ ಬನ್ನಿ. ಕುಳಿತುಕೊಂಡು ಮಾತನಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಳೆದ ಮೂರು ದಿವಸಗಳಿಂದಲೂ ಬರುತ್ತಿದ್ದೇವೆ. ತಾವೂ ಕೂಡ ಹೇಗಾದರೂ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಕಳಕಳಿ ಇದೆ. ಆದರೆ ಬಗ್ಗೆ ಸಂಶಯ ಇಲ್ಲ. ಇಲ್ಲಿ ಇವರನ್ನು ವೆಲ್‌ನಲ್ಲಿ ಕುಳ್ಳಿರಿಸಿಕೊಂಡು ಸದನದ ಕಾರ್ಯಕಲಾಪಗಳು ಈ ತರಹ ನಡೆಯಬಾರದು ಬೇಡ. ವಿರೋಧ ಪಕ್ಷದ ಒಳಿ ಜನ ಈ ಸದನದ ವೆಲ್‌ನೊಳಗೆ ಕುಳಿತಿರುವಂತಹ ಸಮಯದಲ್ಲೂ ಸದನದ ಕಾರ್ಯಕಲಾಪಗಳನ್ನು ನಡೆಸುವುದು ಎಷ್ಟು ಸರಿ ? ನಿಮಗೆ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ತೊಂದರೆ ಇಲ್ಲದಿದ್ದರೂ ಇದು ಬೇಡ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಲಿ. ನೀವು ಅವರಿಗೂ ಇವರಿಗೂ ಹೇಳಿ ಸರಿಪಡಿಸುತ್ತೀರೋ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅವರೂ ಕೂಡ ವಿರೋಧ ಪಕ್ಷದ ಸದಸ್ಯರನ್ನು ಈ ರೀತಿ ಕುಳ್ಳಿರಿಸಿಕೊಂಡು ಸದನದ ಕಾರ್ಯಕಲಾಪಗಳನ್ನು ನಡೆಸುವುದು ಸರಿಯಲ್ಲ. ಅವರು ಇದನ್ನು ಪ್ರಸ್ಟೇಜ್ ಆಗಿ ತೆಗೆದುಕೊಂಡ ಹಾಗೆ ಕಾಣುತ್ತದೆ. ''ಗೀವ್ ಅಂಡ್ ಟೇಕ್'' ಎಂದು ಇರಬೇಕು. ೪ ದಿವಸಗಳಿಂದ ಈ ರೀತಿ ಸುಮ್ಮನೆ ಕುಳಿತುಕೊಂಡಿರುವುದು ವೇಸ್ಟ್. ಸುಮ್ಮನೆ ನಮ್ಮನ್ಯಾಕೆ ಬೆಂಗಳೂರಿಗೆ ಕರೆಸಿದಿರಿ? Opposition Parties are part and parcel of this House.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ಸದಸ್ಯರೂ ಬಹಳ ಮಟ್ಟಿಗೆ ಪ್ರಯತ್ನ ಮಾಡಿದ್ದಾರೆ. ಅದೇ ರೀತಿ ಸರ್ಕಾರವು ಕೂಡ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದೆ. ಸರ್ಕಾರದ ಮನಸ್ಸು ತೆರೆದ ಮನಸ್ಸಾಗಿದೆ. ಪುನಃ ಪ್ರಯತ್ನ ಮಾಡೋಣ. ಅಧ್ಯಕ್ಷರು ಪ್ರಶ್ನೋತ್ತರ ವೇಳೆ ಎಂದು ಕರೆದಿದ್ದಾರೆ. ಪ್ರಶ್ನೋತ್ತರ ವೇಳೆ ಮುಂಗಿಯಲಿ. ನಂತರ ಕುಳಿತು ಚರ್ಚೆ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತೆರೆದ ಮನಸ್ಸು ಎಲ್ಲಿದೆ?.....

(ಗೊಂದಲ)

ಶ್ರೀ ಪಂಪಾಪತಿ.—ತಾವು ಕೂಡ ವಿರೋಧಪಕ್ಷದಲ್ಲಿದ್ದಂಥವರು, ದಯವಿಟ್ಟು ಇರುವಂತಹ ಸಮಸ್ಯೆಯನ್ನು ಬಗೆಹರಿಸಿ. ಅಥವಾ ಅವರ ಬಗ್ಗೆ ಒಂದು ತೀರ್ಮಾನ ಮಾಡಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಕ್ಕೂ ವಿರೋಧ ಪಕ್ಷದ ಸದಸ್ಯರನ್ನು ಇಲ್ಲಿ ಕೂಡಿಸಿ ಕೊಂಡು ಕೆಲಸ ಮಾಡತಕ್ಕಂಥ ಮನಸ್ಸು ಇಲ್ಲ. ನಮಗೂ ಕೂಡ ವ್ಯಥೆಯಾಗಿದೆ, ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇನ್ನೂ ಪ್ರಯತ್ನ ಮಾಡುವುದಕ್ಕೆ ತಯಾರಿದ್ದೇವೆ. ಕಳೆದ ೪ ದಿವಸಗಳಿಂದ ಸಭೆಯ ಕಲಾಪ ನಡೆದಿಲ್ಲ. ಇವತ್ತಾದರೂ ಕಾರ್ಯಕಲಾಪ ನಡೆಯಬೇಕು. ಮಾನ್ಯ ಕೈಗಾರಿಕಾ ಮಂತ್ರಿಗಳು ಹೇಳಿದ ಹಾಗೆ ಒಂದು ನಿಮಿಷಕ್ಕೆ ೮ ಸಾವಿರ ರೂಪಾಯಿಗಳು ೧೦ ವರ್ಷಗಳ ಹಿಂದೆ ಖರ್ಚಾಗುತ್ತಿತ್ತು. ಈಗ ಇನ್ನೂ ಜಾಸ್ತಿ ಖರ್ಚಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಷ್ಟು ದಿವಸ ಎಲ್ಲಿ ಹೋಗಿತ್ತು ಸ್ವಾಮಿ ಈ ಕಾಳಜಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಒಂದು ನಿಮಿಷಕ್ಕೆ ೧೬ ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸ ಎಲ್ಲಿ ಹೋಗಿತ್ತು ಈ ಮನೋಭಾವ.

(ಗೊಂದಲ)

ಅಧ್ಯಕ್ಷರು —ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳೂ ಹೇಳಿದ್ದಾರೆ. ಪ್ರಶ್ನೋತ್ತರ ವೇಳೆ ಮುಗಿಯಲಿ. ಎಲ್ಲಾ ಮಂಖಿಂಡರೂ ಅಲ್ಲಿಗೆ ಬನ್ನಿ. ಪ್ರಯತ್ನ ಮಾಡೋಣ. ಸಮಸ್ಯೆಯನ್ನು ಬಗೆಹರಿಸಬೇಕೆಂಬ ಪ್ರಾಮಾಣಿಕ ಮನಸ್ಸು ನನಗಂತೂ ಇದ್ದೇ ಇದೆ.

SRI R. VENKATARAMAIAH.—The House is not in order. The Question Hour is also part and parcel of the business of the House.

ಶ್ರೀ ಪಂಪಾಪತಿ.—ತಾವೂ ವಿರೋಧ ಪಕ್ಷದಲ್ಲಿದ್ದಂಥವರು. ಈ ರೀತಿ ಎಂದಾದರೂ ವಿರೋಧ ಪಕ್ಷದ ಸದಸ್ಯರನ್ನು ಕೂಡಿಸಿಕೊಂಡು ಕೆಲಸ ಮಾಡಿದ್ದರೇ...

(ಗೊಂದಲ)

ಶ್ರೀ ಎಂ. ಶ್ರೀನಿವಾಸ್.—ಸರ್ಕಾರಕ್ಕೆ ಸಹಾಯ ಮಾಡುವುದಕ್ಕಾಗಿ ಬಹಳ ಪ್ರಯತ್ನ ಮಾಡಿದ್ದಾರೆ. ಆದರೆ ಪ್ರಶ್ನೋತ್ತರ ವೇಳೆ ಮುಗಿಯಲಿ.

(ಗೊಂದಲ)

ಅಧ್ಯಕ್ಷರು.—ಇಬ್ಬರು ಮಂತ್ರಿಗಳು ಇಲ್ಲಿ ಇದ್ದಾರೆ. ಅವರೂ ಮಾತನಾಡುತ್ತಾರೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಈ ಬಗ್ಗೆ ಕೃಷ್ಣನ್ ಅವರು ನಾವು ಎಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಯಾವುದಕ್ಕೂ ಒಂದು ಇತಿ ಮಿತಿ ಇರುತ್ತದೆ. ಕೆಲವು ವಿಷಯಗಳ ಬಗ್ಗೆ ಮನಸ್ಸಿಗೆ ನೋವು ಆದಾಗ ಧಾರಾಳವಾಗಿ ಅವರನ್ನು ಕರೆಯಿಸಿ ಮಾತನಾಡಿ. ಈ ರೀತಿ ಮಾಡುವುದು ಸರಿಯಲ್ಲ ...

(ಗೊಂದಲ)

ಅಧ್ಯಕ್ಷರು —ಎಲ್ಲಗನ್ನೂ ಕರೆಯಿಸಂತ್ತೇನೆಂದು ನಾನು ಹೇಳಿದ್ದೇನೆ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಇವತ್ತು ಪ್ರಯತ್ನ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ಕೃಷ್ಣನ್ ಅವರು ಪರಿಹಾರವನ್ನು ಸೂಚಿಸಿದ್ದಾರೆ.

ಅಧ್ಯಕ್ಷರು.—ನೀವಿಬ್ಬರೇ ಮಾತನಾಡಿದರೆ ಹೇಗೆ...

(ಗೊಂದಲ)

ಶ್ರೀ ಪಂಪಾಪತಿ.—ವಿರೋಧ ಪಕ್ಷದ ನಾಯಕರನ್ನೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಜಾಗ್ರತೆಯಾಗಿ ಇದನ್ನು ತೀರ್ಮಾನ ಮಾಡಿ. ಹೊರಗಡೆ ಜನ ನಾವು ಮಾಡುವುದನ್ನು ನೋಡುತ್ತಿದ್ದಾರೆ. ಎರಡು ದಿವಸಗಳಿಂದ ಈ ರೀತಿ ಕಾರ್ಯಕಲಾಪ ಇಲ್ಲದೆ ಇರುವುದರ ಬಗ್ಗೆ ಜನರಲ್ಲಿ ಜಿಜ್ಞಾಸೆ ಮೂಡಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸಣ್ಣ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಡಳಿತ ಪಕ್ಷದವರಿಗೆ ಆಗಂವುದಿಲ್ಲವೇ?

(ಗೊಂದಲ)

ಅಧ್ಯಕ್ಷರು.—ನನ್ನ ಮನವಿಯನ್ನು ಕೇಳಿ, ಇಲ್ಲಿ ಎಲ್ಲರೂ ಸಹಕರಿಸಿಕೊಂಡು ಹೋಗಬೇಕಾಗುತ್ತದೆ. ನಿಮ್ಮನ್ನೂ ಕರೆಯಿಸಿ ಮಾತನಾಡುತ್ತೇನೆ. ಈಗ ಸ್ವಲ್ಪ ಕಾರ್ಯಕಲಾಪ ನಡೆಸೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧಿಕಾರ ಇದೆ ಎಂದು ಹೇಳಿ ವಿರೋಧ ಪಕ್ಷದವರನ್ನು ಇಲ್ಲಿ ಕೂಡಿಸಿ ಅವಮಾನ ಮಾಡಿ ಕಾರ್ಯಕಲಾಪ ಮಾಡುವುದಕ್ಕೆ ನಾವು ಬಿಡುವುದಿಲ್ಲ ಸ್ವಾಮಿ.

MR. SPEAKER.—Nothing will go on record.

(INTERRUPTION)

ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾವು ಪ್ರಯತ್ನ ಮಾಡೋಣ. ಈಗ ಸಭೆ ನಿಯಮದ ಪ್ರಕಾರ ಇದೆ ಎಂದು ಹೇಳಿದ್ದೇನೆ. ಸಭೆಯ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ನೀವು ಕೂಡಾ ಸಹಕಾರ ಮಾಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಇವತ್ತಿನ ಪ್ರಶ್ನೋತ್ತರ ಪಟ್ಟಿಯಲ್ಲಿ ಳನೇ ಪ್ರಶ್ನೆ ಖಾರ್ಗೆಯವರದ್ದು, ಇದು ೭ನೇ ಪ್ರಶ್ನೆ ವೀರಯ್ಯಸ್ವಾಮಿಯವರದ್ದು ಇದೆ. ಅವರು ಇಲ್ಲದೇ ಪ್ರಶ್ನೋತ್ತರ ವೇಳೆಯನ್ನು ಹೇಗೆ ನಡೆಸುತ್ತೀರಿ?

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಸೇರಿ ಮಾತನಾಡೋಣ. ತಾವು ದಯವಿಟ್ಟು ಕುಳಿತುಕೊಳ್ಳಿ, ಪ್ರಶ್ನೋತ್ತರ ವೇಳೆ ಆದ ಮೇಲೆ ಮಾತನಾಡೋಣ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಮಾತಿಗೆ ನಾವು ಬೆಲೆ ಕೊಡುತ್ತೇವೆ.

ಅಧ್ಯಕ್ಷರು.—ಸಭಾಧ್ಯಕ್ಷರ ಮಾತಿಗೆ ಧಿಕ್ಕಾರ ಮಾಡುವ ಮಟ್ಟಕ್ಕೆ ಹೋಗುವುದು ಬೇಡ. ಆಮೇಲೆ ಕೂಡೋಣ. ನಾವು ಇಷ್ಟು ಹೇಳಿದರೂ ಕೇಳದಿದ್ದರೆ ನೀವುಗಳು ಹೇಳಿದ್ದನ್ನು ರೆಕಾರ್ಡ್ ಮಾಡಬೇಕಾಗುತ್ತದೆ. ಪ್ರಶ್ನೋತ್ತರ ವೇಳೆ ಆದ ಮೇಲೆ ತಾವೆಲ್ಲರೂ ಬನ್ನಿ, ನಾವು ನೀವು ಮಾತನಾಡಿ, ಅವರನ್ನೂ ಕರೆಯಿಸಿ ಏನಾದರೂ ಈ ಪ್ರಸಂಗವನ್ನು ಬಗೆಹರಿಸೋಣ. ಈಗ ಒಂದು ತಾಸು ಕಾರ್ಯಕಲಾಪವನ್ನು ಮಾಡೋಣ ಇದಕ್ಕೆ ತಾವು ಅಡ್ಡಿ ಬರಬೇಡಿ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಆದೇಶಕ್ಕೆ ವಿರುದ್ಧ ಹೋಗಬೇಕೆಂದೇನೂ ನಮಗೆ ಇಲ್ಲ. ಪ್ರಶ್ನೋತ್ತರ ವೇಳೆಯ ಸದುದ್ದೇಶವನ್ನು ನಾವು ನೋಡಬೇಕು. ಇವತ್ತು ನಮ್ಮ ಪಂಥದ ಧರಣಿ ಕುಳಿತಿರುವ ಸದಸ್ಯರು, ಎಂದರೆ ಮೂರು ಸದಸ್ಯರ ಪ್ರಶ್ನೆಗಳು ಇದರಲ್ಲಿ ಇವೆ. ಈ ರೀತಿಯ ವಾತಾವರಣ ಇರಬೇಕಾದರೆ, ತಮಗೆ ಅಧಿಕಾರ ಇದೆ ಎಂದು ಹೇಳಿ ಸಭೆ ನಡೆಸಿದರೆ ಹೇಗೆ?

ಅಧ್ಯಕ್ಷರು.—ತಾವು ಪ್ರಯತ್ನ ಮಾಡಿ. ನಾವು ಪ್ರಯತ್ನ ಮಾಡುತ್ತೇವೆ. ನಾವೆಲ್ಲಾ ಒಟ್ಟಿಗೆ ಸೇರಿ ಪ್ರಯತ್ನ ಮಾಡೋಣ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಈ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಆದರೆ ಇದೇ ಸರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಪ್ರಸಂಗ ಇತ್ಯರ್ಥವಾಗಬೇಕಾಗಿದೆ. ಪ್ರಶ್ನೋತ್ತರ ವೇಳೆಯನ್ನು ಮುಂದೆ ಹಾಕಿ.

ಅಧ್ಯಕ್ಷರು.— ನಿಮಗೆ ಎಷ್ಟು ಸಲ ಹೇಳಬೇಕು ? ನೀವು ಕುಳಿತುಕೊಳ್ಳಿ.

SRI R. S. MANE.— Sir, even one member sitting in the well renders the House in disorder. Number of questions pertaining to Congress (I) Members squatting in the well have been listed for the day. This cannot go on. This amounts to discrimination.

ಅಧ್ಯಕ್ಷರು.— ಮಾನ್ಯ ಮಾನೆಯವರೇ ತಾವು ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಈ ಮನೆಯಲ್ಲಿ ಧರಣಿ ಕುಳಿತಾಗಲೂ ಕೂಡ ಹೌಸ್ ಆರ್ಡರ್‌ನಲ್ಲಿದೆಯೆಂದು ಅನೇಕ ನಿರ್ಣಯಗಳು ಆಗಿವೆ. ಅದರ ಬಗ್ಗೆ ವಾದ ವಿವಾದಗಳು ಇವೆ. ಈ ಮನೆಯಲ್ಲಿ ನಾವೇ ಧರಣಿ ಕುಳಿತಾಗ, ನಮ್ಮ ಪ್ರೊಸೀಡಿಂಗ್ಸ್, ತಂದು ಕೊಡುತ್ತೇನೆ ಹೌಸ್ ನಡೆದಿದೆ. ಕಾರ್ಯಕಲಾಪಗಳು ನಡೆದಿವೆ, ರಿಮಾಂಡ್ಸ್‌ಗಳು, ಪಾಸಾಗಿವೆ. ನಮ್ಮನ್ನು ೧೫ ದಿವಸಗಳ ಕಾಲ ಈ ಸಭೆಯಿಂದ ಹೊರಗೆ ಇಟ್ಟು ಕಾರ್ಯಕಲಾಪಗಳನ್ನು ನಡೆಸಿರುವುದು ಇದೆ. ಮಹಾರಾಷ್ಟ್ರದಲ್ಲಿ ಇಡೀ ವಿರೋಧಪಕ್ಷದವರನ್ನು ಹೊರಗೆ ಇಟ್ಟು ಸಭೆಯನ್ನು ನಡೆಸಿದ್ದಾರೆ. ತಮಿಳುನಾಡಿನಲ್ಲಿ ನಡೆದಿದೆ. ಪಶ್ಚಿಮ ಬಂಗಾಳದಲ್ಲಿ ನಡೆದಿದೆ ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೀರಿ, ನಾವೂ ಮಾಡಿದ್ದೇವೆ, ಮಾಡುತ್ತಿದ್ದೇವೆ. ಏತಕ್ಕೆ ಈ ಮಾತಿಗೆ ಪರಿಹಾರ ಸಿಕ್ಕಿಲ್ಲ ಎನ್ನುವುದು ತಮಗೂ ಗೊತ್ತಿದೆ. ಅದನ್ನು ನಾನು ಹೇಳುವ ಅಪಶ್ಯಕತೆ ಇಲ್ಲ. ಈಗ ಪ್ರಶ್ನೋತ್ತರವೇಳೆ ಪ್ರಾರಂಭವಾಗಿದೆ, ಈಗ ಬೇರೆ ವಿಚಾರ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತಾವು ಯಾವ ರೀತಿ ನಿರ್ಣಯ ಕೊಡುತ್ತೀರೋ ಆದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.— ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಏನು ಇದೆ ?

ಅಧ್ಯಕ್ಷರು.— ಕಮ್ಯುನಿಸ್ಟ್ ಪಕ್ಷಗಳ ಆರು ಜನ ಸದಸ್ಯರು ನಮ್ಮ ಕೊಠಡಿಗೆ ಬನ್ನಿ. ಅವರನ್ನು ಕರೆಯಿಸುತ್ತೇನೆ, ನೀವು ಅವರು ಚರ್ಚೆಮಾಡಿ. ನಿನ್ನೆ ಮೊನ್ನೆ ಮಾತನಾಡಿದರೂ ಸಮಸ್ಯೆ ಬಗೆಹರಿಯಲಿಲ್ಲ. ಸೀರಿಯಸ್ಸಾಗಿ ಇಪತ್ತು ಏನಾದರೂ ಮಾಡಿ ಪ್ರಯತ್ನ ಮಾಡಿ ಈ ಸಮಸ್ಯೆಯನ್ನು ಬಗೆಹರಿಸೋಣ. ತಾವು ಶಾಂತಿಯಿಂದ ಕುಳಿತುಕೊಳ್ಳಿ ಈ ಪ್ರಶ್ನೋತ್ತರ ವೇಳೆ ಮುಗಿಯಲಿ.....

ಶ್ರೀ ಬಿ. ಎಸ್. ಯಡಿಯೂರಪ್ಪ.— ಪ್ರಶ್ನೋತ್ತರ ವೇಳೆ ಮುಗಿಸುವುದು ಬೇಡ, ತಾವು ಏನು ಮಾಡಬೇಕೆಂದು ಇದ್ದೀರಿ ಅದನ್ನು ಈಗಲೇ ಮಾಡಿಬಿಡಿ.

ಶ್ರೀ ಪಂಪಾಪತಿ.— ಪ್ರಶ್ನೋತ್ತರ ವೇಳೆಗಿಂತ ಇದು ಮುಖ್ಯ.

ಅಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿದ ನಂತರ ಈ ಸಮಸ್ಯೆಯನ್ನು ಬಗೆಹರಿಸೋಣವೆಂದು ನಾನು ಆಗಲೇ ಹೇಳಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇಲ್ಲ, ಇಲ್ಲ ನೀವು ಈ ತರಹ ಆದರೆ...

ಶ್ರೀ ಆರ್. ವೆಂಕಟರಾಮಯ್ಯ.— ನಾವು ಇದನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಸಭೆಯನ್ನು ಒಂದು ಗಂಟೆ ಕಾಲ ಮುಂದಕ್ಕೆ ಹಾಕಿ ಈ ಸಮಸ್ಯೆಯನ್ನು ಬಗೆಹರಿಸೋಣ. ತಾವು ಹಾಗೆ ಮಾಡದಿದ್ದರೆ ನಾವು ಕೂಡ ಸಭೆಯಿಂದ ಹೊರಗೆ ಹೋಗುತ್ತೇವೆ.

SRI R. S. MANE.— In protest, I will also walk out.

(At this stage, the hon. Members Sri M. S. Krishnan, Sri pampapathy, Sri U. Bhupathy, Sri K. B. Shanappa, Sri R. Venkataramaiah, Sri R. S. Mane withdrew from the House).

ಅಧ್ಯಕ್ಷರು.— ತಾವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— x x x

MR. SPEAKER.— It will not be recorded. Whatever said by the hon. Member Sri B. S. Yediyurappa should be expunged.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಮಾತನಾಡುವುದು ರೆಕಾರ್ಡ್ ಆಗುವುದು ಬೇಡ.

ಅಧ್ಯಕ್ಷರು.— ನಾನು ಸಿನ್ಸಿಯರ್ ಆಗಿ ತಮಗೆ ಹೇಳಿದ್ದೇನೆ, ವಿರೋಧಪಕ್ಷಗಳ ಮುಖಂಡರು, ತಾವು ಬನ್ನಿ, ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೀರೋ ಎಲ್ಲಾ ಸೇರಿ ಮಾತನಾಡಿ. ಆಮೇಲೆ ಎಲ್ಲರನ್ನು ಕರೆಯಿಸುತ್ತೇನೆಂದು ಹೇಳಿದ್ದೇನೆ. ನಿಮ್ಮನ್ನು ಕರೆಯಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಒಂದೇ ಒಂದು ಪ್ರಾರ್ಥನೆ ಏನೆಂದರೆ, ತಮ್ಮಲ್ಲಿ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ಕಳಕಳಿ ಇದೆ....

ಅಧ್ಯಕ್ಷರು.— ನಿಮಗೆ ನಾನು ಆಗಲೇ ಹೇಳಿದ್ದೇನೆ, ಪ್ರಶ್ನೋತ್ತರವೇಳೆ ನುಗಿದ ಮೇಲೆ ನೀವೂ ಬನ್ನಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಆಯಿತು, ಮಾಡಿ ಸ್ವಾಮಿ.

ಅಧ್ಯಕ್ಷರು.— ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಿಮಗಿಂತ ಹೆಚ್ಚು ಆಸಕ್ತಿ ನನಗೂ ಇದೆ. ಎರಡೂ ಕಡೆಯ ಸದಸ್ಯರು ಗೌರವದಿಂದ ಸಹಕಾರದಿಂದ ಹೋಗಬೇಕು. ಸಭೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯಬೇಕೆನ್ನುವುದು ನನ್ನ ಅಭಿಪ್ರಾಯವಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಜನತಾ ಪಕ್ಷದವರಿಗೆ ಗೌರವ ಕೊಡುವುದು ಸಾಧ್ಯವಿಲ್ಲವಾದರೆ, ಅವರ ಪ್ರಜಾಪ್ರಭುತ್ವ ನೀತಿಯನ್ನು ಪ್ರತಿಭಟನೆ ಮಾಡಿ ನಾನು ಸಭೆಯಿಂದ ಹೊರಗೆ ಹೋಗುತ್ತೇನೆ.

(ಹೊರಡಲುದ್ಯುಕ್ತರಾದರು)

ಅಧ್ಯಕ್ಷರು.— ಶ್ರೀ ಯಡಿಯೂರಪ್ಪನವರೇ, ನೀವು ಸಮಾಧಾನವಾಗಿ ಸ್ವಲ್ಪ ಕೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದು ಬಿ.ಜೆ.ಪಿ. ನಿಲುವು ಇದೆ. ಇವರ ಪ್ರಜಾಪ್ರಭುತ್ವ ನೀತಿಯನ್ನು ಪ್ರತಿಭಟನೆ ಮಾಡಿ ನಾನು ವಾಕ್‌ಔಟ್ ಮಾಡುತ್ತೇನೆ. ನಾವು ಇಬ್ಬರು ಸದಸ್ಯರಿದ್ದೇವೆ. ನಾನು ಶ್ರೀ ಬಂಗೇರಾ ಅವರನ್ನು ವಾಕ್‌ಔಟ್ ಮಾಡಲು ವಿನಂತಿಮಾಡಿಕೊಳ್ಳುತ್ತೇನೆ. ಅವರು ವಾಕ್‌ಔಟ್ ಮಾಡುವುದಿಲ್ಲವಾದರೆ ಅದು ರೆಕಾರ್ಡಿಗೆ ಹೋಗಬೇಕು.

ಶ್ರೀ ವಸಂತ ಬಂಗೇರ.— ಯಡಿಯೂರಪ್ಪನವರ ಬಿ.ಜೆ.ಪಿ.ಯಲ್ಲಿ ನಾನು ಇಲ್ಲ. ನಾನು ಬಂಗೇರ ಬಿ.ಜೆ.ಪಿ.ಯಲ್ಲಿ ಇದ್ದೇನೆ.

(ಶ್ರೀ ಬಿ. ಎಸ್. ಯಡಿಯೂರಪ್ಪನವರು ಸದನದಿಂದ ಹೊರನಡೆದರು). ಶ್ರೀ ವಸಂತ ಬಂಗೇರ ಅವರು ತಮ್ಮ ಸ್ಥಾನದಲ್ಲೇ ಕುಳಿತಿದ್ದರು.)

ಅಧ್ಯಕ್ಷರು.— ಈಗ ಪ್ರಶ್ನೋತ್ತರವೇಳೆ ಶ್ರೀ ದೊಡ್ಡಮೇಟಿಯವರು ತಮ್ಮ ಪ್ರಶ್ನೆಯನ್ನು ಕೇಳಬಹುದು.

---

† ಸಭಾಧ್ಯಕ್ಷರ ಆದೇಶದಂತೆ x x ಗುರುತಿಸಿರುವ ಭಾಗವನ್ನು ತೆಗೆದುಹಾಕಲಾಗಿದೆ.